ಎಂ ವಿ ಸಿ ನಂ:**360/2023**
ಪಿ ಡಬ್ಲ್ಯು: **1**
ದಿನಾಂಕ:**25/11/2024** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಪಾಟೀ ಸವಾಲು ಃ **1** ನೇ ಎದುರುದಾರರ ಪರ ಶ್ರೀ ಎಸ್ ಕೆ ವಕೀಲರಿಂದ:

ಅಪಘಾತಪಡಿಸಿದ ಮೋಟರ್ ಸೈಕಲ್ ಯಾರಿಗೆ ಸೇರಿದ್ದು ಎಂದರೆ ಸಾಕ್ಷಿ ಅಬ್ದುಲ್ ನಾಸೀರ್ ರವರು ಶಿವಮೊಗ್ಗದಿಂದ ಸದರಿ ಬೈಕನ್ನು ಕದ್ದುಕೊಂಡು ಬಂದಿದ್ದರು ಎಂದು ಉತ್ತರಿಸಿರುತ್ತಾರೆ. ಸದರಿ ಬೈಕನ್ನು ಕದ್ದುಕೊಂಡು ಬಂದಿರುವ ವಿಚಾರವನ್ನು ಪೊಲೀಸರು ಹೇಳಿರುತ್ತಾರೆ. ಸದರಿ ಬೈಕನ್ನು ಕದ್ದಿರುವ ಬಗ್ಗೆ ಯಾವುದಾದರೂ ಪ್ರಕರಣ ದಾಖಲಾದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ಅಪಘಾತದ ವಿಚಾರವನ್ನು ಪವಿತ್ರ ಎನ್ನುವವರು ನನಗೆ ನೋಡಿದ ಬಗ್ಗೆ ಹೇಳಿರುತ್ತಾರೆ. ದೂರು ಕೊಡುವ ಕಾಲಕ್ಕೆ ಅಪಘಾತವನ್ನು ಪವಿತ್ರ ರವರು ನೋಡಿರುತ್ತಾರೆ ಎಂಬ ವಿಚಾರವನ್ನು ನಾನು ಪೊಲೀಸರಿಗೆ ಹೇಳಿರುವುದಿಲ್ಲ. ಆ ದಿನ ನನ್ನ ಗಂಡ ಹಾಲು ಮತ್ತು ಮೊಸರನ್ನು ತೆಗೆದುಕೊಂಡು ಮನೆಗೆ ವಾಪಾಸ್ಸು ನಡೆದುಕೊಂಡು ಬರುವಾಗ ಅಪಘಾತ ಆಗಿರುತ್ತದೆ.

2. ಅಪಘಾತ ಅಗ್ರಹಾರದ ಸಮೀಪ ವಿಷ್ಣು ಅಂಗಡಿಯ ಬಳಿ ಆಗಿರುತ್ತದೆ. ಅಪಘಾತದ ಸ್ಥಳದಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತಿದ್ದು, ಸದರಿ ರಸ್ತೆ ತಿರುವಿನಿಂದ ಕೂಡಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಸದರಿ ಅಪಘಾತದ ಸ್ಥಳದ ರಸ್ತೆಯು ತಿರುವಿನಿಂದ ಕೂಡಿದ ಕಾರಣ ವೇಗವಾಗಿ ಚಲಾಯಿಸಿಕೊಂಡು ಬರಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಇಂತಹ ವ್ಯಕ್ತಿಯಿಂದಲೇ ನನ್ನ ಗಂಡನಿಗೆ ಅಪಘಾತ ಆಗಿರುತ್ತದೆ ಎಂದು ಯಾರೂ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಅಪಘಾತ ಆದ ನಂತರ ಆಸ್ಪತ್ರೆಗೆ ಅಪಘಾತಪಡಿಸಿದ ಹುಡುಗ ಮತ್ತು ಅವರ ತಂದೆ ಬಂದಿದ್ದರು ಎಂದು ಉತ್ತರಿಸಿರುತ್ತಾರೆ. ಅಪಘಾತ ಸ್ಥಳದಲ್ಲಿ ಸಾಕಷ್ಟು ಜನ ಬಂದಿದ್ದರು ಎಂದರೆ ಸರಿ. ಆ ದಿನ 1 ನೇ ಎದುರುದಾರ ಬೈಕನ್ನು ಅತಿವೇಗವಾಗಿ ಚಲಾಯಿಸಿಕೊಂಡು ಬಂದ ವಿಚಾರವನ್ನು ಪೊಲೀಸರಿಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತ 1 ನೇ ಎದುರುದಾರನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿರುವ ಪರಿಹಾರ ಕೊಡಲು 1 ನೇ ಎದುರುದಾರ ಬಾದ್ಯಸ್ಥರು ಇರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೂ, 1 ನೇ ಎದುರುದಾರನಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು:

2 ನೇ ಎದುರುದಾರ ಮತ್ತು ಅವರ ಪರ ವಕೀಲರನ್ನು ಕೂಗಿ ಕರೆಸಲಾಗಿ ಗೈರು ಹಾಜರಿದ್ದು ಹಾಗೂ ಆಕ್ಷೇಪಣೆಯನ್ನು ಸಲ್ಲಿಸದ ಕಾರಣ ಅವರ ಪರ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯ್ತು.

ಮರುವಿಚಾರಣೆ: ಇಲ್ಲ::

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು: ನ.ರಾ.ಪುರ.